ಭಾಗವಹಿಸಬಹುದಾದ ಈ ಪ್ರಶಸ್ತಿಗೆ, ಪ್ರತಿಯೊಬ್ಬ ಪ್ರಕಾಶಕರೂ ಎರಡು ಇಂಗ್ಲಿಷ್ ಮತ್ತೆರಡು ಅನುವಾದಿತ ಸೃಜನಶೀಲ ಕೃತಿಗಳನ್ನು (ಕಡ್ಡಾಯವಾಗಿ) ಸ್ಪರ್ಧೆಗೆ ಕಳುಹಿಸಬಹುದು. ಆ ಪುಸ್ತಕಗಳು ಕಳೆದ ವರ್ಷವಷ್ಟೇ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರಬೇಕು. ಅನುವಾದದ ಪುಸ್ತಕವಾದರೆ, ಮೂಲ ಕೃತಿಯು ಮೂರು ವರ್ಷದೊಳಗೆ ಪ್ರಕಟವಾಗಿರಬೇಕು.

ಜ್ಞಾನಪೀಠ ಮತ್ತು ಸರಸ್ವತಿ ಸಮ್ಮಾನ್ ಪ್ರಶಸ್ತಿಗಳನ್ನು ಸಾಹಿತಿಯೊಬ್ಬರ ಒಟ್ಟಾರೆ ಸಾಧನೆಯನ್ನು ಪರಿಗಣಿಸಿ ಕೊಡಲಾಗುತ್ತದೆ. ಕೇಂದ್ರ ಸಾಹಿತ್ಯ ಅಕಾಡೆಮಿಯು ತಮ್ಮ ಪ್ರಶಸ್ತಿಯನ್ನು ಪ್ರತಿಯೊಂದು ದೇಶೀಯ ಭಾಷೆಗೆ ಸೀಮಿತಗೊಳಿಸಿ, ಅಂತರಭಾಷಾ ಮಟ್ಟದಲ್ಲಿ ಯಾವುದೇ ಪ್ರಶಸ್ತಿಯನ್ನು ನೀಡುವುದಿಲ್ಲ. ಆ ಅಗತ್ಯವನ್ನು ಜೆಸಿಬಿ ಪ್ರಶಸ್ತಿಯು ತುಂಬಬಹುದೆಂದು ನಿರೀಕ್ಷಿಸಬಹುದಾಗಿದೆ. ಇಂಗ್ಲಿಷ್ ಪ್ರಕಾಶಕರಿಗೆ ಈ ಪ್ರಶಸ್ತಿಯು ಬಹಳ ಪ್ರತಿಷ್ಠಿತವಾಗಿರುವುದರಿಂದ, ದೇಶೀಯ ಭಾಷೆಯ ಪುಸ್ತಕಗಳ ಗುಣಮಟ್ಟದ ಅನುವಾದಕ್ಕೆ ಬೇಡಿಕೆ ಹೆಚ್ಚಾಗಬಹುದು. ಇದು ಎಲ್ಲಾ ಭಾಷಾ ಲೇಖಕರಿಗೆ ಅನುಕೂಲವನ್ನು ಒದಗಿಸಬಹುದು.

ಈ ಸಲದ ಜೆಸಿಬಿ ಬಹುಮಾನವನ್ನು ಪಡೆದ ಮಲಯಾಳಂ ಲೇಖಕ ಬೆನ್ಯಾಮಿನ್, ತಮ್ಮ ಹಿಂದಿನ ಕೃತಿ 'ಆಡುಜೀವಿತಂ' (ಇದನ್ನು ಡಾ. ಅಶೋಕ್ ಕುಮಾರ್ 'ಆಡುಜೀವನ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ)ನಿಂದಾಗಿ ಸಾಕಷ್ಟು ಪ್ರಸಿದ್ಧರಾಗಿದ್ದಾರೆ. ಅರಬ್ ದೇಶಗಳಿಗೆ ವಲಸೆ ಹೋಗುವ ಬದುಕಿನ ಸಂಕಷ್ಟಗಳನ್ನು ಚಿತ್ರಿಸುವ ಈ ಮಲಯಾಳಂ ಕೃತಿಯ ಎರಡು ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ. ಜೊತೆಗೆ ಈ ಕೃತಿ ಕೇರಳ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನೂ ಗಳಿಸಿ, ಇಂಗ್ಲಿಷ್‌ಗೂ ಅನುವಾದಗೊಂಡು ಸಾಕಷ್ಟು ಜನಮನ್ನಣೆಯನ್ನು ಗಳಿಸಿದೆ. 1971ರಲ್ಲಿ ಹುಟ್ಟಿದ ಬೆನ್ಯಾಮಿನ್ ಸಾಕಷ್ಟು ವರ್ಷ ಬಹರೇನ್‌ನಲ್ಲಿ ನೆಲೆಸಿದ್ದು, ಈಗ ಕೇರಳಕ್ಕೆ ಮರಳಿದ್ದಾರೆ.

'ಜಾಸ್ಮಿನ್ ಡೇಸ್' ಅವರ ಎರಡನೆಯ ಕಾದಂಬರಿ. ಈ ಕೃತಿಯೂ ಅರಬ್ ದೇಶಗಳ ಜಗತ್ತಿನ ಸಂಕಷ್ಟಗಳನ್ನೇ ತೆರೆದಿಡುತ್ತದೆ. ವಲಸೆ, ಧರ್ಮ, ಆರ್ಥಿಕತೆ, ಸ್ವಾತಂತ್ರ್ಯ, ಲೈಂಗಿಕತೆ – ಇತ್ಯಾದಿಗಳನ್ನು ಈ ಕಾದಂಬರಿ ಚಿಂತನೆಗೆ ತೆಗೆದುಕೊಳ್ಳುತ್ತದೆ. ಇಡೀ ಕಥನವನ್ನು 'ಸಮೀರ ಪರ್ವಿನ್' ಎನ್ನುವ ಪಾಕಿಸ್ತಾನಿ ಹುಡುಗಿಯ ಆತ್ಮಕಥನದಂತೆ ನಿರೂಪಿಸಲಾಗಿದೆ. ಅದು ಸ್ವತಃ ಅವಳೇ ಬರೆದಿದ್ದು ಎನ್ನುವ ಭ್ರಮೆಯನ್ನು ಮೂಡಿಸುವ ಸಲುವಾಗಿ ಕಾದಂಬರಿಕಾರ ಇಲ್ಲಿ ತನ್ನನ್ನು ಅನುವಾದಕ ಎಂದು ಕರೆದುಕೊಂಡಿದ್ದಾರೆ. ಹಿಂದೆ ಪುಟ್ಟಣ್ಣ ಕಣಗಾಲ್ ಅವರು ತಮ್ಮ ಸಿನಿಮಾಗಳಿಗೆ 'ಜಗನ್ಮಾತೆ'ಯದೇ ದಿಗ್ದರ್ಶನ ಎಂದು ಹೇಳಿ, ತಮ್ಮನ್ನು ಸಹನಿರ್ದೇಶಕ ಎಂದು ಕರೆದುಕೊಂಡ ರೀತಿಯ ತಂತ್ರವನ್ನು ಇಲ್ಲಿ ಕಾದಂಬರಿಕಾರರು ಬಳಸಿದ್ದಾರೆ. ಕಾದಂಬರಿಯ ಕೊನೆಯಲ್ಲಿ 'ಅನುವಾದಕನ ಮಾತುಗಳು' ಎಂದು ಹೇಳಿ ಒಂದು ಅಧ್ಯಾಯವನ್ನೂ ಬರೆದಿದ್ದಾರೆ. ಬಹುಶಃ ತಮ್ಮದು ಪೂರ್ವಗ್ರಹವಿಲ್ಲದ ಬರವಣಿಗೆ ಎಂದು ಓದುಗರಿಗೆ ಮನವರಿಕೆ ಮಾಡಿಕೊಡುವುದಕ್ಕೆ ಇಂತಹ ತಂತ್ರವನ್ನು ಬಳಸಿರುವ ಸಾಧ್ಯತೆಯಿದೆ. ಕಾದಂಬರಿಯಲ್ಲಿ ಮಲಯಾಳಿ ಜನರ ಗುಂಪನ್ನು 'ಮಲಯಾಳಿ ಮಾಫಿಯ' ಎಂದು ಕರೆಯುವದಕ್ಕೂ ಇದು ಅವಕಾಶ ಮಾಡಿಕೊಟ್ಟಿದೆ.

ಬಹುತೇಕ ಮಧ್ಯಪ್ರಾಚ್ಯ ದೇಶಗಳಲ್ಲಿ ಸುನ್ನಿ ಸಂಸ್ಕೃತಿಯ ಜನರು ಮೇಲುಗೈ ಸಾಧಿಸಿದ್ದಾರೆ. ರಾಜಕೀಯ ಮತ್ತು ಆರ್ಥಿಕ ಶಕ್ತಿಗಳು ಇವರ ಕೈಯಲ್ಲಿವೆ. ಆದರೆ ಈ ದೇಶಗಳಿಗೆ ಬದುಕು ಹುಡುಕಿಕೊಂಡು ಬಂದ ಇರಾನ್ ಮತ್ತು ಇರಾಕ್ ದೇಶಗಳ ಜನರು ಶಿಯಾ ಧರ್ಮವನ್ನು ಪಾಲಿಸುತ್ತಾರೆ. ಹಲವು ಶತಮಾನಗಳ ಹಿಂದೆಯೇ ಇವರಿಲ್ಲಿಗೆ ವಲಸೆ ಬಂದಿರುವುದರಿಂದ, ಇವರು ಅಲ್ಲಿಯ ನಾಗರಿಕತೆಯನ್ನು ಹೊಂದಿದ್ದಾರೆ. ಸೊಗಸಾದ ಉದ್ಯೋಗ, ಹಣ, ಮನೆ, ಮಕ್ಕಳನ್ನು ಇವರು